# ರೇಷ್ಮೆ ಇಲಾಖೆಯ ವಾರ್ಷಿಕ ವರದಿ

## (2018-19)

**1.0 ಪೀಠಿಕೆ :**

1.1 ರೇಷ್ಮೆ ಕೃಷಿಯು ರಾಜ್ಯದಲ್ಲಿ 250 ವರ್ಷಗಳ ಹಿಂದಿನಿಂದಲೂ ಒಂದು ಪರಂಪರಾಗತ ಕೃಷಿ ಉದ್ಯಮವಾಗಿದೆ. ಈ ಉದ್ಯಮವು ಕೃಷಿ ಮೂಲದ, ಕಾರ್ಮಿಕ ಪ್ರಧಾನ, ರಫ್ತು ಆಧಾರಿತ ವಾಣಿಜ್ಯ ಚಟುವಟಿಕೆಯಾಗಿದ್ದು, ಕರ್ನಾಟಕ ರಾಜ್ಯದಲ್ಲಿ ಪ್ರಮುಖ ಗುಡಿ ಕೈಗಾರಿಕೆಯಾಗಿದೆ. ರೇಷ್ಮೆ ಕೃಷಿಯು ಉಪಕಸುಬಾಗಿದ್ದು, ಇತ್ತೀಚೆಗೆ ಮುಖ್ಯ ಕಸುಬಾಗಿ ಪರಿಣಮಿಸುತ್ತಿದೆ ಹಾಗೂ ರೈತರು ರೇಷ್ಮೆ ಕೃಷಿಯನ್ನು ದೊಡ್ಡ ಪ್ರಮಾಣದಲ್ಲಿ ಕೈಗೊಳ್ಳಲು ಆಸಕ್ತಿ ತೋರುತ್ತಿದ್ದಾರೆ.

1.2 2018–19ನೇ ಸಾಲಿನ ರಾಜ್ಯ ವಲಯ ಹಾಗೂ ಜಿಲ್ಲಾ ವಲಯ ಯೋಜನೆಯ ಅನುದಾನ ಮತ್ತು ವೆಚ್ಚದ ವಿವರಗಳು ಕೆಳಕಂಡಂತಿವೆ:

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ವರ್ಷ | ನಿಗದಿ ಪಡಿಸಿದ ಆಯವ್ಯಯ | ಪರಿಷ್ಕೃತ ಆಯವ್ಯಯ | ಬಿಡುಗಡೆ ಯಾದ ಅನುದಾನ | ವೆಚ್ಚ | ಬಿಡುಗಡೆಗೆ ಶೇಕಡ ಸಾಧನೆ |
|---|---|---|---|---|---|---|
| **ರಾಜ್ಯ ವಲಯ** | | | | | | |
| 1 | 2018-19 | 31754.00 | 32412.437 | 32412.437 | 32208.747 | 99 |
| 2 | 2017-18 | 39394.00 | 39591.600 | 39591.600 | 35959.646 | 91 |
| **ಜಿಲ್ಲಾ ವಲಯ** | | | | | | |
| 1 | 2018-19 | 9222.740 | 10378.790 | 10370.290 | 8769.993 | 85 |
| 2 | 2017-18 | 9297.380 | 9526.050 | 8844.750 | 7837.630 | 89 |

1.3 **ಭೌತಿಕ ಗುರಿ ಮತ್ತು ಸಾಧನೆ :**

ಕಚ್ಚಾ ರೇಷ್ಮೆಯ ಗುರಿ ಮತ್ತು ಅಂದಾಜು ಉತ್ಪಾದನೆಯ ವಿವರಗಳು ಕೆಳಕಂಡಂತಿವೆ:

(ಮೆ.ಟನ್‌ಗಳಲ್ಲಿ)

| ಕ್ರ. ಸಂ | ವಿವರ | 2018-19 | | | 2017-18 | | |
|---|---|---|---|---|---|---|---|
| | | ವಾರ್ಷಿಕ ಗುರಿ | ಅಂದಾಜು ಉತ್ಪಾದನೆ | ಶೇಕಡ ಸಾಧನೆ | ವಾರ್ಷಿಕ ಗುರಿ | ಅಂದಾಜು ಉತ್ಪಾದನೆ | ಶೇಕಡ ಸಾಧನೆ |
| 1 | ಮಿಶ್ರತಳಿ | 9360.00 | 9525.25 | 102 | 8900.00 | 7670.85 | 86 |
| | ದ್ವಿತಳಿ | 2055.00 | 2067.06 | 101 | 1600.00 | 1650.66 | 103 |
| | **ಒಟ್ಟು** | **11415.00** | **11592.31** | **102** | **10500.00** | **9321.51** | **89** |

ಕಳೆದ ವರ್ಷ ಉತ್ಪಾದಿಸಿದ ದ್ವಿತಳಿ ರೇಷ್ಮೆಗೆ ಹೋಲಿಸಿದಲ್ಲಿ 416.40 ಮೆ.ಟನ್, ಅಂದರೆ ಶೇ.25ರಷ್ಟು ಹೆಚ್ಚುವರಿ ಉತ್ಪಾದನೆಯಾಗಿದ್ದು, **ಇದು ಸರ್ವಕಾಲಿಕ ದಾಖಲೆಯಾಗಿರುತ್ತದೆ.**

ಸದರಿ ವರ್ಷದಲ್ಲಿ ಅಂದಾಜು ಒಟ್ಟು 11592.31 ಮೆ.ಟನ್ ರೇಷ್ಮೆ ಉತ್ಪಾದಿಸಲಾಗಿದ್ದು, ಕಳೆದ ವರ್ಷ ಉತ್ಪಾದಿಸಿದ ಒಟ್ಟು 9321.50 ಮೆ.ಟನ್ ರೇಷ್ಮೆಗೆ ಹೋಲಿಸಿದಲ್ಲಿ ಉತ್ಪಾದನೆಯಲ್ಲಿ **ಶೇ.24 ರಷ್ಟು ಅಧಿಕವಾಗಿರುತ್ತದೆ.**

## 2.0 ಇಲಾಖೆಯ ಪಾತ್ರ :

ರೇಷ್ಮೆ ಇಲಾಖೆಯು ಕೆಳಕಂಡ ಮುಖ್ಯ ಸೇವೆಗಳನ್ನು ಒದಗಿಸುತ್ತಿದೆ :

2.1 ರೇಷ್ಮೆ ಕೃಷಿ ಚಟುವಟಿಕೆಗಳಾದ ಹಿಪ್ಪುನೇರಳೆ ವ್ಯವಸಾಯ, ರೇಷ್ಮೆ ಹುಳು ಸಾಕಾಣಿಕೆ, ನೂಲು ಬಿಚ್ಚಾಣಿಕೆ ಇತ್ಯಾದಿಗಳ ಬಗ್ಗೆ ತಾಂತ್ರಿಕ ಮಾರ್ಗದರ್ಶನ ನೀಡುವುದು ಮತ್ತು ತರಬೇತಿ ಒದಗಿಸುವುದು.

2.2 ಅಧಿಕ ಇಳುವರಿ ನೀಡುವ ಹಿಪ್ಪುನೇರಳೆ ಮತ್ತು ರೇಷ್ಮೆ ಹುಳುವಿನ ತಳಿಗಳನ್ನು ಅಭಿವೃದ್ಧಿಪಡಿಸಿ ರೇಷ್ಮೆ ಕೃಷಿಕರಿಗೆ ಒದಗಿಸುವುದು.

2.3 ಹಿಪ್ಪುನೇರಳೆ ಹಾಗೂ ರೇಷ್ಮೆ ಹುಳುವಿನ ಮೂಲ ಬಿತ್ತನೆ ನಿರ್ವಹಿಸುವುದು ಮತ್ತು ರೋಗರಹಿತ ರೇಷ್ಮೆ ಮೊಟ್ಟೆಗಳನ್ನು ರೈತರಿಗೆ ಒದಗಿಸಲು ವ್ಯವಸ್ಥೆಗಳನ್ನು ರೂಪಿಸುವುದು.

2.4 ವಿಸ್ತರಣೆ, ಚಾಕಿ ಸಾಕಣೆ ಮತ್ತು ರೋಗ ನಿಯಂತ್ರಣ ಸೌಲಭ್ಯಗಳನ್ನು ರೇಷ್ಮೆ ಬೆಳೆಗಾರರಿಗೆ ಒದಗಿಸುವುದು.

2.5 ರೈತರಿಗೆ/ನೂಲು ಬಿಚ್ಚಾಣಿಕೆದಾರರಿಗೆ ರೇಷ್ಮೆ ಚಟುವಟಿಕೆಗಳಿಗಾಗಿ ಬ್ಯಾಂಕುಗಳಿಂದ ಸಾಲ ಸೌಲಭ್ಯ ಒದಗಿಸಲು ಸಹಾಯ ಮಾಡುವುದು.

2.6 ರೇಷ್ಮೆ ಗೂಡು ಮತ್ತು ಕಚ್ಚಾ ರೇಷ್ಮೆ ಮಾರಾಟಕ್ಕೆ ಸೌಲಭ್ಯಗಳನ್ನು ಒದಗಿಸುವುದು.

2.7 ರೇಷ್ಮೆ ಗೂಡು ಮತ್ತು ರೇಷ್ಮೆ ನೂಲಿಗೆ ಸೂಕ್ತ ದರ ದೊರೆಯಲು ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವುದು.

2.8 ರೇಷ್ಮೆ ಬೆಳೆಗಾರರು ಮತ್ತು ರೇಷ್ಮೆ ನೂಲು ಬಿಚ್ಚಾಣಿಕೆದಾರರಿಗೆ ಹೊಸ ತಾಂತ್ರಿಕತೆಗಳನ್ನು ಅಳವಡಿಸಿ ಉತ್ಪಾದನೆ, ಉತ್ಪಾದಕತೆ, ಗೂಡುಗಳ ಇಳುವರಿ ಮತ್ತು ಗುಣಮಟ್ಟ ಹೆಚ್ಚಿಸಿ ಗೂಡು ಹಾಗೂ ಕಚ್ಚಾ ರೇಷ್ಮೆ ಉತ್ಪಾದನಾ ವೆಚ್ಚ ಕಡಿಮೆ ಮಾಡಲು ಪ್ರೇರೇಪಿಸುವುದು.

2.9 ರಾಜ್ಯದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಬಲಪಡಿಸುವುದು.

2.10 ಅಂತರಾಷ್ಟ್ರೀಯ ಗುಣಮಟ್ಟದ ರೇಷ್ಮೆ ಉತ್ಪಾದಿಸಲು ಸ್ವಯಂಚಾಲಿತ ನೂಲು ಬಿಚ್ಚಾಣಿಕೆ (ARM) ಘಟಕಗಳ ಸ್ಥಾಪನೆಗೆ ಸಹಾಯ ನೀಡುವುದು.

2.11 ಇಲಾಖೆಯ 10 ವಿವಿಧ ಸೇವೆಗಳನ್ನು "ಸಕಾಲ"ದ ಅಡಿಯಲ್ಲಿ ಗುರುತಿಸಲಾಗಿದೆ.

2.12 ರಾಜ್ಯದಲ್ಲಿ 5 ರೇಷ್ಮೆ ರೈತ ಉತ್ಪಾದಕ ಸಂಸ್ಥೆಗಳನ್ನು ಪ್ರಾರಂಭಿಸಲಾಗಿದೆ.

## 3.0 ಹಿಪ್ಪುನೇರಳೆ ವಿಸ್ತೀರ್ಣ :

ಹಿಪ್ಪುನೇರಳೆ ನಾಟಿಯ ಗುರಿ ಮತ್ತು ಸಾಧನೆಯ ವಿವರಗಳು ಕೆಳಕಂಡಂತಿವೆ:

(ಹೆಕ್ಟೇರ್‌ಗಳಲ್ಲಿ)

| ವರ್ಷ | 2018–19 | | |
|---|---|---|---|
| | ವಾರ್ಷಿಕ ಗುರಿ | ಸಾಧನೆ | ಶೇ.ಸಾಧನೆ |
| 2018-19 | 6500.00 | 9095.74 | 140 |
| 2017-18 | 6500.00 | 8144.61 | 125 |

ಮಾರ್ಚ್–2018ರ ಅಂತ್ಯಕ್ಕೆ ಒಟ್ಟಾರೆ 98134.61 ಹೆಕ್ಟೇರ್ ಹಿಪ್ಪುನೇರಳೆ ವಿಸ್ತೀರ್ಣವಿದ್ದು, ಮಾರ್ಚ್–2019ರ ಅಂತ್ಯಕ್ಕೆ ಒಟ್ಟಾರೆ 1,04,577.56 ಹೆಕ್ಟೇರ್ ಹಿಪ್ಪುನೇರಳೆ ವಿಸ್ತೀರ್ಣವಿದೆ. ಕಳೆದ ವರ್ಷಕ್ಕೆ ಹೋಲಿಸಿದಲ್ಲಿ ರಾಜ್ಯದಲ್ಲಿ ಹಿಪ್ಪುನೇರಳೆ ವಿಸ್ತೀರ್ಣ ಶೇ.6.6ರಷ್ಟು ಹೆಚ್ಚಳವಾಗಿದೆ.

## 4.0 ಬಿತ್ತನೆ ಪ್ರದೇಶಗಳು :

### 4.1 ಮೈಸೂರು ಬಿತ್ತನೆ ವಲಯ :

ಮೈಸೂರು ಬಿತ್ತನೆ ವಲಯವು ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕು, ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕು ಮತ್ತು ತುಮಕೂರು ತಾಲ್ಲೂಕಿನ ಹೆಬ್ಬೂರು ಹೋಬಳಿಯನ್ನು ಒಳಗೊಂಡಿರುತ್ತದೆ. 2018–19ನೇ ಸಾಲಿನ ಪ್ರಗತಿಯ ವಿವರಗಳು ಕೆಳಕಂಡಂತಿವೆ:

| ಕ್ರ. ಸಂ | ವಿವರ | ಘಟಕ | 2018-19 | 2017-18 |
|---|---|---|---|---|
| 1 | ಹಿಪ್ಪುನೇರಳೆ ವಿಸ್ತೀರ್ಣ | ಹೆಕ್ಟೇರ್ | 1201.27 | 1210.77 |
| 2 | ಹಳ್ಳಿಗಳು | ಸಂಖ್ಯೆ | 518 | 514 |
| 3 | ರೇಷ್ಮೆ ಬೆಳೆಗಾರರು | ಸಂಖ್ಯೆ | 5659 | 5583 |
| 4 | ಚಾಕಿಯಾದ ಮೊಟ್ಟೆಗಳು | ಲಕ್ಷ | 19.936 | 19.430 |
| 5 | ಹಣ್ಣಾದ ಮೊಟ್ಟೆಗಳು | ಲಕ್ಷ | 19.258 | 18.050 |
| 6 | ಉತ್ಪಾದನೆಯಾದ ಗೂಡಿನ ಪ್ರಮಾಣ | ಮೆ.ಟನ್ | 814.530 | 651.94 |
| | | ಕೋಟಿ | 68.87 | 56.55 |
| 7 | ಬಿತ್ತನೆಗೆ ವಹಿವಾಟಾದ ಗೂಡಿನ ಪ್ರಮಾಣ | ಮೆ.ಟನ್ | 467.885 | 447.110 |
| | | ಕೋಟಿ | 37.62 | 38.42 |
| 8 | ನೂಲು ಬಿಚ್ಚಾಣಿಕೆಗೆ ವಹಿವಾಟಾದ ಗೂಡಿನ ಪ್ರಮಾಣ | ಮೆ.ಟನ್ | 346.645 | 204.830 |
| | | ಕೋಟಿ | 31.25 | 18.13 |
| 9 | ಬಿತ್ತನೆಗೆ ಬೇಡಿಕೆಯಿಲ್ಲದೆ ನೂಲು ಬಿಚ್ಚಾಣಿಕೆಗೆ ಮಾರಾಟವಾಗಿ ಬೋನಸ್ ಪಡೆಯಲು ಅರ್ಹವಾದ ಗೂಡಿನ ಪ್ರಮಾಣ | ಮೆ.ಟನ್ | 337.472 | 180.79 |
| 10 | ಪಾವತಿಸಲಾದ ಬೋನಸ್–ರೂ.175/–ಕೆ.ಜಿ.ಗೆ | ರೂ.ಲಕ್ಷ | 590.575 | 399.934* |
| 11 | 100 ಮೊಟ್ಟೆಗಳಿಗೆ ಸರಾಸರಿ ಇಳುವರಿ | ಕೆ.ಜಿ | 42.29 | 38.16 |
| | | ಸಂಖ್ಯೆ | 35761 | 31294 |

* 2017–18ನೇ ಸಾಲಿನಲ್ಲಿ ರೂ.150/– ಹಾಗೂ ರೂ.175/–ರಂತೆ ಬೋನಸ್ ಪಾವತಿಸಲಾಗಿದ್ದು, 2016–17ನೇ ಸಾಲಿನ ಫೆಬ್ರವರಿ– ಮಾರ್ಚ್ ಮಾಹೆಯ ಆರ್ಥಿಕ ಪ್ರಗತಿ ಒಳಗೊಂಡಿರುತ್ತದೆ.

ಪಿ1 ಶುದ್ದ ಮೈಸೂರು ತಳಿ ಮೊಟ್ಟೆ ಚಾಕಿಗೆ ಪ್ರತಿ 100 ಮೊಟ್ಟೆಗೆ ರೂ.750/– ಚಾಕಿ ಪ್ರೋತ್ಸಾಹಧನವನ್ನು ನೀಡುವ ಕಾರ್ಯಕ್ರಮದಡಿ 2018–19ನೇ ಸಾಲಿನಲ್ಲಿ 2,70,028 ಮೊಟ್ಟೆಗಳಿಗೆ ರೂ.20.252 ಲಕ್ಷಗಳ ಚಾಕಿ ಪ್ರೋತ್ಸಾಹಧನವನ್ನು ಪಾವತಿಸಲಾಗಿದೆ.

### 4.2 ದ್ವಿತಳಿ ಬಿತ್ತನೆ ವಲಯ :

ರಾಜ್ಯದ 7 ಜಿಲ್ಲೆಗಳ ಪೈಕಿ ಗುರುತಿಸಿರುವ 31 ತಾಲ್ಲೂಕುಗಳಲ್ಲಿ ದ್ವಿತಳಿ ಬಿತ್ತನೆ ಗೂಡನ್ನು ಉತ್ಪಾದನೆ ಮಾಡುತ್ತಿದ್ದು, ಹಾಸನ, ಆನೇಕಲ್, ತುಮಕೂರು ಮತ್ತು ಕೆ.ಆರ್.ಪೇಟೆ ಬಿತ್ತನೆ ಪ್ರದೇಶದಲ್ಲಿ ಹೆಚ್ಚು ಪಾಲು ಬಿತ್ತನೆ ಗೂಡು ಉತ್ಪಾದನೆಯಾಗುತ್ತಿದೆ. ಈ ಪ್ರದೇಶದಲ್ಲಿ ಹೆಚ್ಚಾಗಿ ಸಿಎಸ್ಆರ್–2 ತಳಿಯ ಮೊಟ್ಟೆಗಳ ಸಾಕಾಣಿಕೆ ಮಾಡಲಾಗುತ್ತಿದೆ. ದ್ವಿತಳಿ ಕಾರ್ಯಕ್ರಮದಡಿ ದ್ವಿತಳಿ ಸಂಕರಣ ಮೊಟ್ಟೆ ಉತ್ಪಾದನೆಗೆ ಬೇಕಾಗುವ ಸಿಎಸ್ಆರ್–2, ಸಿಎಸ್ಆರ್–4, ಎಫ್‌ಸಿ1 ಮತ್ತು ಎಫ್‌ಸಿ2 ತಳಿಯ ಮೊಟ್ಟೆಗಳ ಸಾಕಾಣಿಕೆ ಸಹ ಮಾಡಲಾಗುತ್ತಿದೆ. 2018–19ನೇ ಸಾಲಿನ ಪ್ರಗತಿಯ ವಿವರಗಳು ಕೆಳಕಂಡಂತಿವೆ:

| ಕ್ರ.ಸಂ | ವಿವರ | ಘಟಕ | 2018-19 | 2017-18 |
|---|---|---|---|---|
| 1 | ಹಿಪ್ಪುನೇರಳೆ ವಿಸ್ತೀರ್ಣ | ಹೆಕ್ಟೇರ್ | 3146.85 | 2543.99 |
| 2 | ರೇಷ್ಮೆ ಬೆಳೆಗಾರರು | ಸಂಖ್ಯೆ | 4276 | 4145 |
| 3 | ಚಾಕಿಯಾದ ಶುದ್ಧ ದ್ವಿತಳಿ ಮೊಟ್ಟೆಗಳು (ಬಿತ್ತನೇತರ ಪ್ರದೇಶವು ಒಳಗೊಂಡಂತೆ) | ಲಕ್ಷ | 12.134 | 9.329 |
| 4 | ಹಣ್ಣಾದ ಮೊಟ್ಟೆಗಳು | ಲಕ್ಷ | 10.975 | 8.669 |
| 5 | ಉತ್ಪಾದನೆಯಾದ ಗೂಡಿನ ಪ್ರಮಾಣ | ಮೆ.ಟನ್ | 661.723 | 536.03 |
| | | ಕೋಟಿ | 43.025 | 34.840 |
| 7 | ಬಿತ್ತನೆಗೆ ವಹಿವಾಟಾದ ಗೂಡಿನ ಪ್ರಮಾಣ | ಮೆ.ಟನ್ | 434.061 | 374.31 |
| | | ಕೋಟಿ | 28.196 | 24.33 |
| 8 | ನೂಲು ಬಿಚ್ಚಾಣಿಕೆಗೆ ವಹಿಟಾದ ಗೂಡಿನ ಪ್ರಮಾಣ | ಮೆ.ಟನ್ | 227.662 | 161.72 |
| | | ಕೋಟಿ | 14.829 | 10.510 |
| 9 | ಬಿತ್ತನೆಗೆ ಬೇಡಿಕೆಯಿಲ್ಲದೆ ನೂಲು ಬಿಚ್ಚಾಣಿಕೆಗೆ ಮಾರಾಟವಾಗಿ ಬೋನಸ್ ಪಡೆಯಲು ಅರ್ಹವಾದ ಗೂಡಿನ ಪ್ರಮಾಣ | ಮೆ.ಟನ್ | 124.711 | 143.056 |
| 10 | ಪಾವತಿಸಲಾದ ಬೋನಸ್ ರೂ.175/–ಕೆ.ಜಿ.ಗೆ | ರೂ.ಲಕ್ಷ | 218.245 | 228.265* |
| 11 | 100 ಮೊಟ್ಟೆಗಳಿಗೆ ಸರಾಸರಿ ಇಳುವರಿ | ಕೆ.ಜಿ | 60.31 | 61.80 |
| | | ಸಂಖ್ಯೆ | 39204 | 40196 |

* 2017–18ನೇ ಸಾಲಿನಲ್ಲಿ ರೂ.150/– ಹಾಗೂ ರೂ.175/–ರಂತೆ ಪ್ರೋತ್ಸಾಹಧನ ಪಾವತಿಸಲಾಗಿದ್ದು, 2016–17ನೇ ಸಾಲಿನ ಫೆಬ್ರವರಿ–ಮಾರ್ಚ್ ಮಾಹೆಯ ಆರ್ಥಿಕ ಪ್ರಗತಿ ಒಳಗೊಂಡಿರುತ್ತದೆ.

ದ್ವಿತಳಿ ಸಂಕರಣ ಮೊಟ್ಟೆ ಚಾಕಿಗೆ ಪ್ರತಿ 100 ಮೊಟ್ಟೆಗೆ ರೂ.1000/– ಚಾಕಿ ಪ್ರೋತ್ಸಾಹಧನವನ್ನು ನೀಡುವ ಕಾರ್ಯಕ್ರಮದಡಿ 2018–19ನೇ ಸಾಲಿನಲ್ಲಿ 1,30,18,090 ಮೊಟ್ಟೆಗಳಿಗೆ ರೂ.1301.808 ಲಕ್ಷಗಳ ಚಾಕಿ ಪ್ರೋತ್ಸಾಹಧನವನ್ನು ಪಾವತಿಸಲಾಗಿದೆ.

ನಿರಂತರ ಬಿತ್ತನೆ ಗೂಡಿನ ಸರಬರಾಜಿಗಾಗಿ ಬಿತ್ತನೆ ಬೆಳೆಗಾರರನ್ನು ಪ್ರೋತ್ಸಾಹಿಸಲು ಉತ್ಪಾದನೆ ಹಾಗೂ ಗುಣಮಟ್ಟದ ಆಧಾರದ ಮೇಲೆ ಬಿತ್ತನೆ ಗೂಡಿಗೆ ಪ್ರೋತ್ಸಾಹಧನವನ್ನು ಪ್ರತಿ ಕೆ.ಜಿಗೆ ರೂ.70/–ರಂತೆ ಮೈಸೂರು ತಳಿ ಹಾಗೂ ದ್ವಿತಳಿ ಗೂಡಿಗೆ 2018–19ನೇ ಸಾಲಿನಲ್ಲಿ ರೂ.722.272 ಲಕ್ಷಗಳ ಪ್ರೋತ್ಸಾಹಧನ ಪಾವತಿಸಲಾಗಿದೆ.

**5.0 ರೇಷ್ಮೆ ಕೃಷಿ ಕ್ಷೇತ್ರಗಳು :**

89 ರೇಷ್ಮೆ ಕೃಷಿ ಕ್ಷೇತ್ರಗಳ ಪೈಕಿ ವರದಿಯ ಸಾಲಿನಲ್ಲಿ 46 ರೇಷ್ಮೆ ಕೃಷಿ ಕ್ಷೇತ್ರಗಳು ಕಾರ್ಯನಿರ್ವಹಿಸುತ್ತಿವೆ. ಈ ಕೃಷಿ ಕ್ಷೇತ್ರಗಳಲ್ಲಿ 16.828 ಲಕ್ಷ ಮೂಲ ತಳಿ ಬಿತ್ತನೆ ಗೂಡುಗಳನ್ನು ಉತ್ಪಾದಿಸಲಾಗಿದೆ. ಕಳೆದ ಸಾಲಿನಲ್ಲಿ 16.783 ಲಕ್ಷ ಮೂಲ ತಳಿ ಬಿತ್ತನೆ ಗೂಡುಗಳ ಉತ್ಪಾದನೆಯಾಗಿತ್ತು.

**6.0 ರೇಷ್ಮೆ ಮೊಟ್ಟೆ ಉತ್ಪಾದನೆ :**

54 ರೇಷ್ಮೆ ಬಿತ್ತನೆ ಕೋಠಿಗಳ ಪೈಕಿ ವರದಿಯ ಸಾಲಿನಲ್ಲಿ ರಾಜ್ಯದಲ್ಲಿ 36 ಸರ್ಕಾರಿ ಬಿತ್ತನೆ ಕೋಠಿಗಳು ಕಾರ್ಯ ನಿರ್ವಹಿಸುತ್ತಿದ್ದು, 6 ಕೇಂದ್ರ ರೇಷ್ಮೆ ಮಂಡಳಿಯ ಬಿತ್ತನೆ ಕೋಠಿಗಳು ಹಾಗೂ 373 ಖಾಸಗಿ ನೋಂದಾಯಿತ ರೇಷ್ಮೆ ಬಿತ್ತನೆ ಕೋಠಿಗಳ ಸಹಯೋಗದೊಂದಿಗೆ ರೇಷ್ಮೆ ಮೊಟ್ಟೆಗಳನ್ನು ಉತ್ಪಾದಿಸಿ ರೇಷ್ಮೆ ಬೆಳೆಗಾರರಿಗೆ ವಿತರಿಸುವ ಕಾರ್ಯದಲ್ಲಿ ನಿರತವಾಗಿವೆ. 36 ಸರ್ಕಾರಿ ಬಿತ್ತನೆ ಕೋಠಿಗಳ ಪೈಕಿ ಮೈಸೂರು ಬಿತ್ತನೆ ವಲಯದ 15 ಬಿತ್ತನೆ ಕೋಠಿಗಳಲ್ಲಿ ಶುದ್ಧ ಮೈಸೂರು ತಳಿ ರೇಷ್ಮೆ ಮೊಟ್ಟೆಗಳನ್ನು ಉತ್ಪಾದಿಸಿ ವಿತರಿಸಲಾಗುತ್ತಿದೆ. ಉಳಿದ ಬಿತ್ತನೆ ಕೋಠಿಗಳು

ಬಿತ್ತನೇತರ ಪ್ರದೇಶಗಳಲ್ಲಿ ಹಾಗೂ ದ್ವಿತಳಿ ಬಿತ್ತನೆ ವಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಈ ಎಲ್ಲಾ ಬಿತ್ತನೆ ಕೋಠಿಗಳಲ್ಲಿ ಹಾಗೂ ನೋಂದಾಯಿತ ಖಾಸಗಿ ಮೊಟ್ಟೆ ತಯಾರಕರು ಸೇರಿದಂತೆ 2018-19ನೇ ಸಾಲಿನಲ್ಲಿ ಒಟ್ಟು 1321.589 ಲಕ್ಷ ಮೊಟ್ಟೆಗಳ ಉತ್ಪಾದನೆಯಾಗಿದೆ. ಕಳೆದ ಸಾಲಿನಲ್ಲಿ 1193.087 ಲಕ್ಷ ರೇಷ್ಮೆ ಮೊಟ್ಟೆಗಳ ಉತ್ಪಾದನೆಯಾಗಿತ್ತು.

**7.0 ರೇಷ್ಮೆ ಗೂಡಿನ ಉತ್ಪಾದನೆ :**

**7.1** ರೇಷ್ಮೆ ಗೂಡಿನ ಅಂದಾಜು ಉತ್ಪಾದನೆಯ ವಿವರ ಕೆಳಕಂಡಂತಿವೆ. (ಮೆ.ಟನ್)

| ವಿವರ | 2018-19 | | | 2017-18 | | |
|---|---|---|---|---|---|---|
| | ವಾರ್ಷಿಕ ಗುರಿ | ಅಂದಾಜು ಉತ್ಪಾದನೆ | ಶೇಕಡ ಸಾಧನೆ | ವಾರ್ಷಿಕ ಗುರಿ | ಅಂದಾಜು ಉತ್ಪಾದನೆ | ಶೇಕಡ ಸಾಧನೆ |
| ಮಿಶ್ರತಳಿ | 67392.00 | 69146.713 | 103 | 64080.00 | 55734.618 | 87 |
| ದ್ವಿತಳಿ | 13357.50 | 13869.969 | 104 | 10400.00 | 11097.976 | 107 |
| **ಒಟ್ಟು** | **80749.50** | **83016.682** | **103** | **74480.00** | **66832.594** | **90** |

ಕಳೆದ ಸಾಲಿನಲ್ಲಿ ಉತ್ಪಾದನೆಯಾದ 11097.976 ಮೆ.ಟನ್ ದ್ವಿತಳಿ ಗೂಡಿಗೆ ಹೋಲಿಸಿದಲ್ಲಿ ಶೇ.25ರಷ್ಟು ಹೆಚ್ಚಿನ ಪ್ರಗತಿಯಾಗಿದ್ದು, ಇದು ಸರ್ವಕಾಲಿಕ ಸಾಧನೆಯಾಗಿರುತ್ತದೆ.

**7.2** 2018-19ನೇ ಸಾಲಿನಲ್ಲಿ ಪ್ರತಿ ಕೆಜಿ ಸರಾಸರಿ ರೇಷ್ಮೆ ಗೂಡಿನ ಧಾರಣೆ ರೂ.301.85 ಆಗಿದ್ದು, ಹಿಂದಿನ ವರ್ಷದ ರೇಷ್ಮೆ ಗೂಡುಗಳ ಸರಾಸರಿ ಧಾರಣೆ ರೂ.422.95ಗೆ ಹೋಲಿಸಿದಲ್ಲಿ ರೂ.121.10 ಕಡಿಮೆಯಾಗಿರುತ್ತದೆ.

**7.3** ರೇಷ್ಮೆ ಗೂಡಿನ ವಹಿವಾಟಿನಲ್ಲಿ ಪಾರದರ್ಶಕತೆ ಹಾಗೂ ಗೂಡುಗಳಿಗೆ ಸ್ಪರ್ಧಾತ್ಮಕ ದರ ನಿಗದಿಗಾಗಿ ಇ-ಹರಾಜು ಪದ್ಧತಿಯನ್ನು ರಾಮನಗರ, ಕೊಳ್ಳೇಗಾಲ, ಶಿಡ್ಲಘಟ್ಟ, ಕೋಲಾರ, ಕನಕಪುರ, ಚನ್ನಪಟ್ಟಣ, ವಿಜಯಪುರ, ಮಳವಳ್ಳಿ, ಹೆಚ್.ಕ್ರಾಸ್ ಮತ್ತು ಚಿಂತಾಮಣಿ ರೇಷ್ಮೆ ಗೂಡು ಮಾರುಕಟ್ಟೆಗಳಲ್ಲಿ ಅಳವಡಿಸಲಾಗಿದೆ. ಶ್ರೀನಿವಾಸಪುರ, ಕ್ಯಾಲನೂರು, ಚಿಕ್ಕಬಳ್ಳಾಪುರ ಮತ್ತು ಹಾವೇರಿ ರೇಷ್ಮೆ ಗೂಡು ಮಾರಕಟ್ಟೆಯಲ್ಲಿ ಇ-ಹರಾಜು ಪದ್ಧತಿ ಅಳವಡಿಸಲು ಕ್ರಮವಹಿಸಲಾಗುತ್ತಿದೆ.

**7.4** ರಾಮನಗರ, ಶಿಡ್ಲಘಟ್ಟ, ಕೊಳ್ಳೇಗಾಲ, ಕನಕಪುರ, ಕೋಲಾರ, ಚನ್ನಪಟ್ಟಣ, ಚಿಂತಾಮಣಿ ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ರೇಷ್ಮೆ ಗೂಡು ಪರೀಕ್ಷಾ ಪ್ರಯೋಗಾಲಯ ಕಟ್ಟಡಗಳನ್ನು ನಿರ್ಮಿಸಲಾಗಿದ್ದು, 2018-19ನೇ ಸಾಲಿನಲ್ಲಿ ಕನಕಪುರ ರೇಷ್ಮೆ ಗೂಡಿನ ಮಾರುಕಟ್ಟೆಯಲ್ಲಿ ರೇಷ್ಮೆ ಗೂಡು ಶ್ರೇಣೀಕರಣವನ್ನು ಪ್ರಾಯೋಗಿಕವಾಗಿ ಪ್ರಾರಂಭಿಸಲಾಗಿದೆ.

**7.5** 2018-19ನೇ ಸಾಲಿನಲ್ಲಿ ರಾಮನಗರ ಮತ್ತು ಕೋಲಾರ ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ಇ-ಹಣ ಪಾವತಿಯ ಪದ್ಧತಿಯನ್ನು ಪ್ರಾಯೋಗಿಕವಾಗಿ ಪ್ರಾರಂಭಿಸಲಾಗಿದೆ. ಈ ಪದ್ಧತಿಯಲ್ಲಿ ರೇಷ್ಮೆ ಗೂಡಿನ ಮೌಲ್ಯವನ್ನು ರೇಷ್ಮೆ ಬೆಳೆಗಾರರ ಬ್ಯಾಂಕ್ ಖಾತೆಗೆ ನೇರವಾಗಿ ವರ್ಗಾವಣೆ ಮಾಡಲಾಗುವುದು.

**8.0 ಕಚ್ಚಾ ರೇಷ್ಮೆ ಉತ್ಪಾದನೆ :**

8.1 2018-19ನೇ ಸಾಲಿಗೆ ರಾಜ್ಯದಲ್ಲಿ 11,415 ಮೆ.ಟನ್ ರೇಷ್ಮೆ ಉತ್ಪಾದನಾ ಗುರಿ ನಿಗದಿಪಡಿಸಲಾಗಿದ್ದು, ಇದರಲ್ಲಿ 2,055 ಮೆ.ಟನ್ ದ್ವಿತಳಿ ರೇಷ್ಮೆ ಒಳಗೊಂಡಿದೆ. ಅಂದಾಜು 11,592.31 ಮೆ.ಟನ್ ರೇಷ್ಮೆ ಉತ್ಪಾದಿಸಲಾಗಿದ್ದು, ಇದರಲ್ಲಿ 2,067.06 ಮೆ.ಟನ್ ದ್ವಿತಳಿ ರೇಷ್ಮೆಯಾಗಿದೆ. ಕಳೆದ ಸಾಲಿನಲ್ಲಿ ಅಂದಾಜು 1,650.656 ಮೆ.ಟನ್ ದ್ವಿತಳಿ ರೇಷ್ಮೆ ಸೇರಿದಂತೆ ಅಂದಾಜು 9,321.51 ಮೆ.ಟನ್ ರೇಷ್ಮೆ ಉತ್ಪಾದನೆಯಾಗಿತ್ತು.

8.2 ಪ್ರತಿ ಕೆ.ಜಿ. ಕಚ್ಚಾ ರೇಷ್ಮೆಯ ಸರಾಸರಿ ದರಗಳ ವಿವರಗಳು ಕೆಳಕಂಡಂತಿದೆ. (ರೂ.ಗಳಲ್ಲಿ)

| ಕ್ರ. ಸಂ | ವಿವರ | 2018-19 | 2017-18 |
|---|---|---|---|
| 1 | ಮಲ್ಟಿಎಂಡ್ | 3142 | 3519 |
| 2 | ಸ್ವಯಂಚಾಲಿತ ರೀಲಿಂಗ್ (ಎ.ಆರ್.ಎಂ) | 3520 | 3593 |
| 3 | ಫಿಲೇಚರ್ | 3122 | 3487 |
| 4 | ಚರಕ | 2775 | 3231 |
| 5 | ಡೂಪಿಯಾನ್ | 2055 | 2400 |

**9.0 ಸರ್ಕಾರಿ ರೇಷ್ಮೆ ಕಾರ್ಖಾನೆಗಳು :**

ರಾಜ್ಯದ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ, ಮಾಂಬಳ್ಳಿ, ಸಂತೇಮರಹಳ್ಳಿ, ಚಾಮರಾಜನಗರ ಮತ್ತು ದಾವಣಗೆರೆ ಜಿಲ್ಲೆಯ ತೋಳಹುಣಸೆಯಲ್ಲಿ ಸರ್ಕಾರಿ ರೇಷ್ಮೆ ಕಾರ್ಖಾನೆಗಳನ್ನು ಸ್ಥಾಪಿಸಲಾಗಿದೆ. ತೋಳಹುಣಸೆ ರೇಷ್ಮೆ ಕಾರ್ಖಾನೆಯು ಅರೆ ಸ್ವಯಂಚಾಲಿತ ಕಿರುಘಟಕವಾಗಿದ್ದು ವಿಶ್ವಬ್ಯಾಂಕ್ ನೆರವಿನ ಕಾರ್ಯಕ್ರಮದಡಿ ಸ್ಥಾಪಿಸಲಾಗಿದೆ. 2015–16 ರಿಂದ 2018–19ನೇ ಸಾಲಿನವರೆಗೆ ಈ ಕಾರ್ಖಾನೆಗಳಲ್ಲಿ ಕಾರ್ಯ ಸ್ಥಗಿತವಾಗಿರುತ್ತದೆ.

**10.0 ಸಹಕಾರ ಸಂಘಗಳು :**

ರಾಜ್ಯದಲ್ಲಿರುವ ಒಟ್ಟು 95 ರೇಷ್ಮೆ ಸಹಕಾರ ಸಂಘಗಳ ಪೈಕಿ, 43 ರೇಷ್ಮೆ ಬೆಳೆಗಾರರ ಹಾಗೂ ರೈತ ಸೇವಾ ಸಹಕಾರ ಸಂಘಗಳಾಗಿ ಮಾರ್ಪಾಟು ಹೊಂದಿದ್ದು, ಸಹಕಾರ ಇಲಾಖೆಯಲ್ಲಿ ಆಯಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಮೂಲಕ ಶೂನ್ಯ ಬಡ್ಡಿದರದಲ್ಲಿ ರೇಷ್ಮೆ ಬೆಳೆಗಾರರಿಗೆ ಬೆಳೆ ಸಾಲ ನೀಡುವುದು ಇವುಗಳ ಮುಖ್ಯ ಉದ್ದೇಶವಾಗಿರುತ್ತದೆ. ಇಂತಹ ಸಹಕಾರ ಸಂಘಗಳು ರೇಷ್ಮೆ ಇಲಾಖೆಯಿಂದ ಯಾವುದೇ ಅನುದಾನವನ್ನಾಗಲಿ ಅಥವಾ ಸಹಾಯಧನವನ್ನಾಗಲಿ ಪಡೆದಿರುವುದಿಲ್ಲ. ಇನ್ನು ಬಾಕಿ ಉಳಿದ 52 ಸಹಕಾರ ಸಂಘಗಳ ಪೈಕಿ, 20 ಇತರೆ ರೇಷ್ಮೆ ಸಹಕಾರ ಸಂಘಗಳಾಗಿದ್ದು, ಈ ಸಂಘಗಳು ರೇಷ್ಮೆ ಮತ್ತು ರೇಷ್ಮೆ ಉಪ ಉತ್ಪನ್ನಗಳ ಮಾರಾಟದಲ್ಲಿ ತೊಡಗಿರುವುದರಿಂದ ರೇಷ್ಮೆ ನೂಲು ಬಿಚ್ಚಾಣಿಕೆದಾರರ ಹಾಗೂ ಕೈಗಾರಿಕಾ ಸಹಕಾರ ಸಂಘಗಳ ವ್ಯಾಪ್ತಿಗೆ ಒಳಪಟ್ಟಿರುವುದಿಲ್ಲ. ಇನ್ನುಳಿದ 32 ರೇಷ್ಮೆ ನೂಲು ಬಿಚ್ಚುವವರ/ಬಿಚ್ಚಾಣಿಕೆದಾರರ ಸಹಕಾರ ಸಂಘಗಳಿದ್ದು, ಇವುಗಳಲ್ಲಿ 19 ಕಾರ್ಯನಿರತ. 03 ಸ್ಥಗಿತ ಹಾಗೂ 10 ಸಹಕಾರ ಸಂಘಗಳು ಸಮಾಪನೆಯಲ್ಲಿರುತ್ತವೆ. ಈ 32 ರೇಷ್ಮೆ ಬಿಚ್ಚಾಣಿಕೆದಾರರ ಸಹಕಾರ ಸಂಘಗಳ ಪೈಕಿ ಕರ್ನಾಟಕ ರಾಜ್ಯ ರೇಷ್ಮೆ ಮಾರಾಟ ಸಹಕಾರ ಮಹಾಮಂಡಳ ನಿ., ಬೆಂಗಳೂರು ಸಹ ಒಳಗೊಂಡಿರುತ್ತದೆ.

**11.0 ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ :**

ಈ ಯೋಜನೆಯಡಿ, ಉದ್ಯೋಗ ಒದಗಿಸಲು ಮತ್ತು ಆಸ್ತಿ ಸೃಷ್ಟಿಗೆ ಆದ್ಯತೆ ನೀಡಲಾಗುತ್ತಿದ್ದು, ಇದು ಗ್ರಾಮೀಣ ಬದುಕನ್ನು ಆರ್ಥಿಕವಾಗಿ ಉತ್ತಮಗೊಳಿಸಿದೆ. ಗ್ರಾಮೀಣ ಪ್ರದೇಶದಲ್ಲಿ ರೇಷ್ಮೆ ಕೃಷಿಯನ್ನು ಅವಲಂಬಿಸಿರುವ ಬೆಳೆಗಾರರಿಗೆ ಹೆಚ್ಚುವರಿ ಸವಲತ್ತು ಒದಗಿಸುವ ಉದ್ದೇಶದಿಂದ ಹಿಪ್ಪುನೇರಳೆ ತೋಟ ಅಭಿವೃದ್ಧಿಗೆ ಸಂಬಂಧಿಸಿದ ಹಿಪ್ಪುನೇರಳೆ ನರ್ಸರಿ, ತೋಟ ಸ್ಥಾಪನೆ ಹಾಗೂ ನಿರ್ವಹಣೆ, ಮರ ಕೃಷಿ ಹಾಗೂ ನಿರ್ವಹಣೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಇವುಗಳಿಗಾಗಿ ಸಂಪೂರ್ಣ ಕೂಲಿ ವೆಚ್ಚವನ್ನು ಈ ಯೋಜನೆಯಡಿ ಭರಿಸಲಾಗುತ್ತಿದೆ.

ಇವುಗಳಿಂದ ಹಿಪ್ಪುನೇರಳೆ ವಿಸ್ತೀರ್ಣ ಹೆಚ್ಚಳವಾಗುವುದಲ್ಲದೇ, ಮಣ್ಣಿನ ಫಲವತ್ತತೆ ಸುಧಾರಣೆಯೊಂದಿಗೆ ಮಣ್ಣಿನ ಆರೋಗ್ಯ ಉತ್ತಮವಾಗುವುದರಿಂದ ಗೂಡಿನ ಉತ್ಪಾದನೆ ಅಧಿಕವಾಗಿ ರೇಷ್ಮೆ ಬೆಳೆಗಾರರ ಆರ್ಥಿಕ ಮಟ್ಟ ಸುಧಾರಿಸುತ್ತದೆ.

ಸದರಿ ಯೋಜನೆಯಡಿ, 2018-19ನೇ ಸಾಲಿನಲ್ಲಿ ರೇಷ್ಮೆ ಇಲಾಖೆಯಲ್ಲಿ 12300 ಕಾಮಗಾರಿಗಳು ಹಾಗೂ ಆರ್ಥಿಕ ಗುರಿ ರೂ.112.128 ಕೋಟಿ (ರೂ.9.559 ಕೋಟಿ ಇಲಾಖೆಯಿಂದ ಒಗ್ಗೂಡಿಸುವಿಕೆ ಅನುದಾನ ಹಾಗೂ ರೂ.102.569 ಕೋಟಿ ಉದ್ಯೋಗ ಖಾತರಿ ಅನುದಾನ) ಪ್ರಸ್ತಾಪಿಸಲಾಗಿದ್ದು, 12262 ಕಾಮಗಾರಿಗಳು ಚಾಲನೆಯಾಗಿದ್ದು, ರೂ.12.694 ಕೋಟಿ ಇಲಾಖಾ ಅನುದಾನ ಹಾಗೂ ರೂ.60.874 ಕೋಟಿ ಉದ್ಯೋಗ ಖಾತರಿ ಅನುದಾನ ಸೇರಿದಂತೆ ಒಟ್ಟು ರೂ.73.568 ಕೋಟಿ ವೆಚ್ಚ ಭರಿಸಲಾಗಿದೆ ಹಾಗೂ 25,84,137 ಮಾನವ ದಿನಗಳನ್ನು ಸೃಜಿಸಲಾಗಿದೆ.

## 12.0 ರೇಷ್ಮೆ ಅಭಿವೃದ್ಧಿ ಯೋಜನೆ:

ಈ ಯೋಜನೆಯಡಿಯಲ್ಲಿ ಪ್ರಮುಖ ಕಾರ್ಯಕ್ರಮಗಳಾದ ಪ್ರತ್ಯೇಕ ಹುಳು ಸಾಕಾಣಿಕೆ ಮನೆ ನಿರ್ಮಾಣ, ಪ್ರತ್ಯೇಕ ಮೌಂಟಿಂಗ್ ಹಾಲ್ ನಿರ್ಮಾಣ, ಸೋಂಕು ನಿವಾರಕಗಳು, ಹಿಪ್ಪುನೇರಳೆ ತೋಟ ನಿರ್ವಹಣೆ ಸಲಕರಣೆ / ಹುಳು ಸಾಕಾಣಿಕೆ ಸಲಕರಣೆಗಳು, ಗುಣಮಟ್ಟದ ಹಿಪ್ಪುನೇರಳೆ ಸೊಪ್ಪು ಮತ್ತು ರೇಷ್ಮೆ ಗೂಡಿನ ಉತ್ಪಾದನೆಗೆ ಸಹಕಾರಿಯಾಗಿವೆ. ಗೂಡಿನ ನಂತರದ ಕಾರ್ಯಕ್ರಮಗಳಿಗೂ ಸಹಾಯಧನ/ಪ್ರೋತ್ಸಾಹಧನ ನೀಡಲಾಗುತ್ತಿದೆ. 2018-19ನೇ ಸಾಲಿನಲ್ಲಿ ಒಟ್ಟಾರೆ ರೂ.6259.00 ಲಕ್ಷಗಳ ವಂಟನೆ ಪೈಕಿ ಒಟ್ಟು ರೂ.6236.639 ಲಕ್ಷ ವೆಚ್ಚವಾಗಿದ್ದು, ವಿವರ ಕೆಳಕಂಡಂತಿವೆ:

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ವಿವರ | ವಂಟನೆ | ವೆಚ್ಚ |
|---|---|---|---|
| 1 | ರೇಷ್ಮೆ ಅಭಿವೃದ್ಧಿ ಯೋಜನೆ – ಸಾಮಾನ್ಯ | 3930.000 | 3915.851 |
| 2 | ರೇಷ್ಮೆ ಅಭಿವೃದ್ಧಿ ಯೋಜನೆ – ವಿಶೇಷ ಘಟಕ ಯೋಜನೆ | 1553.000 | 1549.719 |
| 3 | ರೇಷ್ಮೆ ಅಭಿವೃದ್ಧಿ ಯೋಜನೆ – ಗಿರಿಜನ ಉಪ ಯೋಜನೆ | 776.000 | 771.069 |
| | **ಎಲ್ಲಾ ಒಟ್ಟು** | **6259.000** | **6236.639** |

## 13.0 ರೇಷ್ಮೆ ಕೃಷಿ ಅಭಿವೃದ್ಧಿಗೆ ನೂತನ ಕರ್ತೃತ್ವ ಶಕ್ತಿ ಮತ್ತು ಭಾಗೀದಾರರಿಗೆ ಸವಲತ್ತು :

ಈ ಯೋಜನೆಯಡಿ ಮೈಸೂರು ಬಿತ್ತನೆ ಗೂಡಿಗೆ ಬೋನಸ್, ದ್ವಿತಳಿ ಬಿತ್ತನೆ ಗೂಡಿಗೆ ಪ್ರೋತ್ಸಾಹಧನ, ಉತ್ಪಾದಕತೆ ಮತ್ತು ಗುಣಮಟ್ಟದ ಆಧಾರಿತ ಗೂಡಿಗೆ ಪ್ರೋತ್ಸಾಹಧನ, ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಉತ್ಪಾದಿಸುವ ದ್ವಿತಳಿ ಗೂಡಿಗೆ ಸಾಗಾಣಿಕೆ ವೆಚ್ಚ, ಮೈಸೂರು ತಳಿ/ದ್ವಿತಳಿ ಚಾಕಿ ಪ್ರೋತ್ಸಾಹಧನ, ರೇಷ್ಮೆ ನೂಲು ಬಿಚ್ಚಾಣಿಕೆ ಚಟುವಟಿಕೆ ಕಾರ್ಯಕ್ರಮಗಳಿಗೆ ಸಹಾಯಧನ, ಕಚ್ಚಾ ರೇಷ್ಮೆಗೆ ಪ್ರೋತ್ಸಾಹಧನ, ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳು ಮುಂತಾದ ಕಾರ್ಯಕ್ರಮಗಳಿಗಾಗಿ 2018-19ನೇ ಸಾಲಿನಲ್ಲಿ ರೂ.4468.00 ಲಕ್ಷಗಳ ವಂಟನೆ ಒದಗಿಸಲಾಗಿದ್ದು, ಒಟ್ಟು ರೂ.4442.908 ಲಕ್ಷಗಳ ವೆಚ್ಚವಾಗಿದೆ.

## 14.0 ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ (PMKSY) :

2018-19ನೇ ಸಾಲಿನಲ್ಲಿ ಈ ಯೋಜನೆಯಡಿ ಹಿಪ್ಪುನೇರಳೆ ತೋಟಗಳಲ್ಲಿ ಹನಿ ನೀರಾವರಿ ಘಟಕಗಳ ಅಳವಡಿಕೆಗಾಗಿ ಸಹಾಯಧನ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದ್ದು, ರೂ.5212.933 ಲಕ್ಷಗಳ ವಂಟನೆ ಒದಗಿಸಿದ್ದು, ರೂ.5206.511 ಲಕ್ಷಗಳನ್ನು ಹನಿ ನೀರಾವರಿಗೆ ಸಹಾಯಧನವಾಗಿ ವೆಚ್ಚ ಮಾಡಲಾಗಿದ್ದು, 6114 ಹೆಕ್ಟೇರ್‌ಗಳಲ್ಲಿ ಹನಿ ನೀರಾವರಿ ಅಳವಡಿಸಲಾಗಿದೆ.

**15.0 2013ರ ಕಾಯಿದೆಯ ಅನ್ವಯ ಉಳಿಕೆಯಾದ ಮೊಬಲಗು** :

2018–19ನೇ ಸಾಲಿನಲ್ಲಿ ಈ ಯೋಜನೆಯಡಿ ರೇಷ್ಮೆ ಹುಳು ಸಾಕಾಣಿಕೆ ಸಲಕರಣೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದ್ದು, ರೂ.138.00 ಲಕ್ಷಗಳ ಅನುದಾನ ಒದಗಿಸಿದ್ದು, ರೂ.135.653 ಲಕ್ಷಗಳು ವೆಚ್ಚವಾಗಿದೆ.

**16.0 ಕರ್ನಾಟಕ ರೇಷ್ಮೆ ವ್ಯವಸಾಯ ಯೋಜನೆ :**

1. **ಕರ್ನಾಟಕ ರೇಷ್ಮೆ ವ್ಯವಸಾಯ ಯೋಜನೆ (ಸಾಮಾನ್ಯ)**

ಈ ಯೋಜನೆಯಡಿಯಲ್ಲಿ ಪ್ರಮುಖ ಕಾರ್ಯಕ್ರಮಗಳಾದ ರೇಷ್ಮೆ ಗೂಡು ಮಾರುಕಟ್ಟೆ ನಿರ್ವಹಣೆ / ಉನ್ನತೀಕರಣ, ರೇಷ್ಮೆ ಬಿತ್ತನೆ ಕೋಠಿಗಳಲ್ಲಿ ಮೊಟ್ಟೆ ಉತ್ಪಾದನೆ, ಶೈತ್ಯಾಗಾರ ಸ್ಥಾಪನೆ, ರೇಷ್ಮೆ ಕೃಷಿ ಕ್ಷೇತ್ರಗಳ ನಿರ್ವಹಣೆ, ರೇಷ್ಮೆ ವಿನಿಮಯ ಕೇಂದ್ರಗಳ ನಿರ್ವಹಣೆ, ದೃಶ್ಯ ಮತ್ತು ಶ್ರಾವ್ಯ ಚಟುವಟಿಕೆಗಳು, ರೇಷ್ಮೆ ತರಬೇತಿ ಸಂಸ್ಥೆಗಳ ನಿರ್ವಹಣೆ ಹಾಗೂ ಪ್ರಗತಿಪರ ಭಾಗೀದಾರರಿಗೆ ಪ್ರಶಸ್ತಿ, ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಗೆ ಆರ್ಥಿಕ ನೆರವು, ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ ಬಲವರ್ಧನೆ, ಕೆ.ಎಸ್.ಐ.ಸಿ. ಸಂಸ್ಥೆಗೆ ಆರ್ಥಿಕ ಸಹಾಯ, ಬಿತ್ತನೆ ವಲಯ ನಿರ್ವಹಣೆ ಮತ್ತು ಸಾಂಸ್ಥಿಕ ಅಭಿವೃದ್ಧಿ, ಪ್ರಗತಿ ಪರ ರೇಷ್ಮೆ ಬೆಳೆಗಾರರಿಂದ ರೇಷ್ಮೆ ಬೆಳೆಗಾರರಿಗೆ ತರಬೇತಿ ಹಾಗೂ ಇತರೆ ಕಾರ್ಯಕ್ರಮಗಳು, 2018–19ನೇ ಸಾಲಿನ ಆಯವ್ಯಯ ಘೋಷಣೆಯ ಹೊಸ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ 2018–19ನೇ ಸಾಲಿನಲ್ಲಿ ಒಟ್ಟಾರೆ 2990.000 ಲಕ್ಷಗಳ ಅನುದಾನ ಒದಗಿಸಿದ್ದು, ರೂ.2901.926 ಲಕ್ಷಗಳು ವೆಚ್ಚವಾಗಿದೆ.

2. **ಕರ್ನಾಟಕ ರೇಷ್ಮೆ ವ್ಯವಸಾಯ ಯೋಜನೆ (ವೇತನಗಳು):**

ಕರ್ನಾಟಕ ರೇಷ್ಮೆ ವ್ಯವಸಾಯ ಯೋಜನೆಯ 2ನೇ ಹಂತದಲ್ಲಿ ಸ್ಥಾಪಿಸಲಾದ ಸಂಸ್ಥೆಗಳ ನಿರ್ವಹಣೆ ಹಾಗೂ ಸೃಜಿಸಲಾದ ಹುದ್ದೆಗಳಲ್ಲಿ ನಿಯೋಜಿಸಿರುವ ಅಧಿಕಾರಿ/ಸಿಬ್ಬಂದಿಗಳ ವೇತನ, ಭತ್ಯೆ ಮುಂತಾದವುಗಳಿಗೆ 2018–19ನೇ ಸಾಲಿನಲ್ಲಿ ರೂ.1411.000 ಲಕ್ಷಗಳ ಅನುದಾನ ಒದಗಿಸಿದ್ದು, ರೂ.1536.553 ಲಕ್ಷಗಳು ವೆಚ್ಚವಾಗಿದೆ.

**17.0 ಕಟ್ಟಡ ಕಾಮಗಾರಿಗಳು :**

ಈ ಯೋಜನೆಯಡಿ ಇಲಾಖೆಯ ಕಟ್ಟಡಗಳ ದುರಸ್ತಿ, ನಿರ್ವಹಣೆ ಹಾಗೂ ಹೊಸ ಕಾಮಗಾರಿಗಳಿಗಾಗಿ 2018–19ನೇ ಸಾಲಿನಲ್ಲಿ ರೂ.49.00 ಲಕ್ಷಗಳ ವಂಟನೆ ಒದಗಿಸಿದ್ದು, ರೂ.37.853 ಲಕ್ಷಗಳ ವೆಚ್ಚವಾಗಿದೆ.

ಈ ಯೋಜನೆಯಡಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿ ರೇಷ್ಮೆ ಹುಳು ಸಾಕಾಣಿಕೆ ಮನೆಗಳ ನಿರ್ಮಾಣಕ್ಕೆ ಸಹಾಯಧನ ಕಾರ್ಯಕ್ರಮ ಅನುಷ್ಠಾನಗೊಳಿಸಲು 2018–19ನೇ ಸಾಲಿನಲ್ಲಿ ರೂ.68.00 ಲಕ್ಷಗಳ ವಂಟನೆ ಒದಗಿಸಿದ್ದು, ರೂ.65.506 ಲಕ್ಷಗಳ ವೆಚ್ಚವಾಗಿದೆ.

**18.0 ನಬಾರ್ಡ್ ಯೋಜನೆ:**

ಈ ಯೋಜನೆಯಡಿ ರೇಷ್ಮೆ ಗೂಡು ಮಾರುಕಟ್ಟೆಗಳ ನಿರ್ಮಾಣಕ್ಕಾಗಿ 2018–19ನೇ ಸಾಲಿನಲ್ಲಿ ರೂ.88.254 ಲಕ್ಷಗಳ ವಂಟನೆ ಒದಗಿಸಿದ್ದು, ರೂ.88.254 ಲಕ್ಷಗಳು ವೆಚ್ಚವಾಗಿದೆ.

**19.0 ರಾಜ್ಯ ರೇಷ್ಮೆ ಉದ್ಯಮಗಳು ಯೋಜನೆ:**

ಈ ಯೋಜನೆಯಡಿ ಇಲಾಖೆಯಲ್ಲಿ ಸ್ಥಾಪಿಸಲಾದ ಸಂಸ್ಥೆ ನಿರ್ವಹಣೆ ಹಾಗೂ ಸೃಜಿಸಲಾದ ಹುದ್ದೆಗಳಲ್ಲಿ ನಿಯೋಜಿಸಿರುವ ಅಧಿಕಾರಿ/ಸಿಬ್ಬಂದಿಗಳ ವೇತನ, ಭತ್ಯೆ ಮುಂತಾದವುಗಳಿಗೆ 2018–19ನೇ ಸಾಲಿನಲ್ಲಿ ರೂ.9595.250 ಲಕ್ಷಗಳ ಅನುದಾನ ಒದಗಿಸಿದ್ದು, ರೂ.10559.716 ಲಕ್ಷಗಳ ವೆಚ್ಚವಾಗಿದೆ.

**ರೇಷ್ಮೆ ಉದ್ಯಮಗಳು(ವಸ್ತ್ರೋದ್ಯಮಗಳು)**

ಈ ಯೋಜನೆಯಡಿ ಇಲಾಖೆಯಲ್ಲಿ ಸ್ಥಾಪಿಸಲಾದ ಕೈಗಾರಿಕೆಗಳ ನಿರ್ವಹಣೆ ಹಾಗೂ ಸೃಜಿಸಲಾದ ಹುದ್ದೆಗಳಲ್ಲಿ ನಿಯೋಜಿಸಿರುವ ಅಧಿಕಾರಿ/ಸಿಬ್ಬಂದಿಗಳು/ಕಾರ್ಮಿಕರ ವೇತನ, ಭತ್ಯೆ ಮುಂತಾದವುಗಳಿಗೆ 2018–19ನೇ ಸಾಲಿನಲ್ಲಿ ರೂ.1297.000 ಲಕ್ಷಗಳ ಅನುದಾನ ಒದಗಿಸಿದ್ದು, ರೂ.997.248 ಲಕ್ಷಗಳು ವೆಚ್ಚವಾಗಿದೆ.

**20.0 ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳು :**

ಇಲಾಖೆಯ ಒಟ್ಟು ಫಲಾನುಭವಿ ಆಧಾರಿತ ಯೋಜನೆಗಳಿಗೆ ಒದಗಿಸಿದ ವಂಟನೆಯ 1/3 ಭಾಗವನ್ನು ಮಹಿಳಾ ಅಭಿವೃದ್ಧಿ ಕಾರ್ಯಕ್ರಮಕ್ಕೆ ಮೀಸಲಿರಿಸುವುದನ್ನು ಈ ಸಾಲಿನಲ್ಲಿಯೂ ಮುಂದುವರೆಸಲಾಗಿದೆ. ಎಲ್ಲಾ ಫಲಾನುಭವಿ ಆಧಾರಿತ ಕಾರ್ಯಕ್ರಮಗಳಲ್ಲಿ ಮಹಿಳೆಯರಿಗೆ ಆದ್ಯತೆ ನೀಡಲಾಗುತ್ತಿದೆ. 2018–19ನೇ ಸಾಲಿನಲ್ಲಿ ಮಹಿಳಾ ಉದ್ದೇಶಿತ ಆಯವ್ಯಯದ ವಿವಿಧ ಕಾರ್ಯಕ್ರಮಗಳಡಿ ಒಟ್ಟು ರೂ.3114.153 ಲಕ್ಷಗಳನ್ನು ಮಹಿಳಾ ಫಲಾನುಭವಿಗಳಿಗೆ ಒದಗಿಸಲಾಗಿದೆ.

**21.0 ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ :**

ಕೇಂದ್ರ ಪುರಸ್ಕೃತ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯನ್ನು 2011–12ನೇ ಸಾಲಿನಿಂದ ಇಲಾಖೆಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಪ್ರಮುಖ ಕಾರ್ಯಕ್ರಮಗಳಾದ ಗುಣಮಟ್ಟದ ಉತ್ಪಾದನೆಗಾಗಿ ಮಣ್ಣಿನ ಫಲವತ್ತತೆ ಸಮೃದ್ಧಿಗೆ ಪ್ಯಾಕೇಜ್, ಮೈಸೂರು / ದ್ವಿತಳಿ ಬಿತ್ತನೆ ಬೆಳೆಗಾರರ ಹಿಪ್ಪುನೇರಳೆ ತೋಟದ ಟ್ರೆಂಚಿಂಗ್ ಮತ್ತು ಮಲ್ಚಿಂಗ್‌ಗಾಗಿ ಸಹಾಯಧನ, ಬಿದರಿನ ಚಂದ್ರಿಕೆ ಖರೀದಿಗೆ ಸಹಾಯಧನ, ಸೋಂಕು ನಿವಾರಕ ಮತ್ತು ಫಾಗರ್ ಹಾಗೂ ಶೈತ್ಯಾಗಾರಕ ಘಟಕ ಅಳವಡಿಕೆಗೆ ಸಹಾಯಧನ, ರೈತ ಉತ್ಪಾದಕ ಸಂಸ್ಥೆಗಳ ಸ್ಥಾಪನೆ ಮತ್ತು ಡಿ.ಎಕ್ಸ್. ಮಾದರಿಯ ಶೈತ್ಯಾಗಾರಗಳ ಕಾರ್ಯಕ್ರಮಗಳಿಗಾಗಿ 2017–18ನೇ ಸಾಲಿನಲ್ಲಿ ಉಳಿಕೆಯಾದ ರೂ.39.00 ಲಕ್ಷ ಸೇರಿ ರೂ.636.00 ಲಕ್ಷಗಳು ಬಿಡುಗಡೆಯಾಗಿದ್ದು, ಈ ಪೈಕಿ ರೂ.583.264 ಲಕ್ಷಗಳ ವೆಚ್ಚ ಭರಿಸಲಾಗಿದೆ.

**22.0 ಸಾಲ ಸೌಲಭ್ಯಗಳು :**

ಕ್ರೆಡಿಟ್ ಕಾರ್ಯಕ್ರಮದಡಿ ರೇಷ್ಮೆ ಕೃಷಿ ಚಟುವಟಿಕೆಗಳನ್ನು ನಡೆಸಲು ವಾಣಿಜ್ಯ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಮತ್ತು ಭೂ ಸಹಕಾರ ಅಭಿವೃದ್ಧಿ ಬ್ಯಾಂಕುಗಳು ಸಾಲದ ರೂಪದಲ್ಲಿ ಧನ ಸಹಾಯ ಒದಗಿಸುತ್ತವೆ. 2018–19ನೇ ಸಾಲಿನ ರೇಷ್ಮೆ ಬೆಳೆಗಾರರು ಮತ್ತು ರೇಷ್ಮೆ ನೂಲು ಬಿಚ್ಚಾಣಿಕೆದಾರರಿಗೆ ಹಿಪ್ಪುನೇರಳೆ ವ್ಯವಸಾಯ, ಸಲಕರಣೆ ಖರೀದಿ, ಹುಳು ಸಾಕುವ ಮನೆ ನಿರ್ಮಿಸಲು, ಹನಿ ನೀರಾವರಿ ಹಾಗೂ ರೀಲಿಂಗ್ ಘಟಕಗಳ ಅಳವಡಿಕೆ ಸೌಲಭ್ಯಗಳಿಗಾಗಿ ಮಾರ್ಚ್–2019ರ ಅಂತ್ಯಕ್ಕೆ ರೂ.1848.44 ಲಕ್ಷಗಳ ವಾರ್ಷಿಕ ಗುರಿ ಹೊಂದಲಾಗಿದ್ದು, ರೂ.982.906 ಲಕ್ಷಗಳ ಸಾಲ ಮಂಜೂರಾಗಿದ್ದು, ಶೇ.53.17ಗಳಷ್ಟು ಪ್ರಗತಿಯಾಗಿರುತ್ತದೆ, ವಿವರ ಈ ಕೆಳಕಂಡಂತಿರುತ್ತವೆ:

| ಕ್ರ. ಸಂ | ಕಾರ್ಯಕ್ರಮಗಳು | ಫಲಾನುಭವಿಗಳು (ಸಂಖ್ಯೆಗಳಲ್ಲಿ) | | ಮಂಜೂರಾದ ಸಾಲ (ರೂ.ಲಕ್ಷಗಳಲ್ಲಿ) | |
|---|---|---|---|---|---|
| | | ಗುರಿ | ಸಾಧನೆ | ಗುರಿ | ಸಾಧನೆ |
| 1. | ಹಿಪ್ಪುನೇರಳೆ ನಾಟಿಗಾಗಿ | 310 | 12 | 74.90 | 3.948 |
| 2. | ಸಲಕರಣೆಗಾಗಿ | 279 | 48 | 99.70 | 23.754 |
| 3. | ರೆಂಬೆ ಮಾದರಿ ಸಲಕರಣೆಗಾಗಿ | 86 | 0 | 31.23 | 0 |
| 4. | ರೇಷ್ಮೆ ಹುಳು ಸಾಕಾಣೆ ಮನೆಗಾಗಿ | 138 | 100 | 260.76 | 394.98 |
| 5. | ರೆಂಬೆ ಮಾದರಿ ಹುಳು ಸಾಕಾಣಿಕೆ ಮನೆಗಾಗಿ | 489 | 179 | 1358.30 | 559.324 |
| 6. | ಹನಿ ನೀರಾವರಿ | 37 | 2 | 16.70 | 0.90 |
| 7 | ಇತರೆ (ರೀಲಿಂಗ್) | 3 | 0 | 6.85 | 0 |
| | **ಒಟ್ಟು** | **1342** | **341** | **1848.44** | **982.906** |

## 23.0 ಮಾನವ ಸಂಪನ್ಮೂಲ ಅಭಿವೃದ್ಧಿ / ತರಬೇತಿ:

23.1 ಇಲಾಖೆಯು 6 ರೇಷ್ಮೆ ತರಬೇತಿ ಸಂಸ್ಥೆಗಳನ್ನು ಹೊಂದಿದೆ. ಈ ತರಬೇತಿ ಸಂಸ್ಥೆಗಳು ರೇಷ್ಮೆ ಬೆಳೆಗಾರರು, ರೇಷ್ಮೆ ನೂಲು ಬಿಚ್ಚಾಣಿಕೆದಾರರು ಹಾಗೂ ಉದ್ಯಮಶೀಲರುಗಳಿಗೆ ತರಬೇತಿ ನೀಡುತ್ತಿವೆ. ಸಂಶೋಧನಾ ಕೇಂದ್ರಗಳು ಅಭಿವೃದ್ಧಿಪಡಿಸಿದ ಹೊಸ ತಾಂತ್ರಿಕತೆಗಳನ್ನು ಪ್ರಾತ್ಯಕ್ಷತೆಗಳ ಮೂಲಕ ಪಸರಿಸುವಲ್ಲಿ ಈ ತರಬೇತಿ ಸಂಸ್ಥೆಗಳು ಪ್ರಮುಖ ಪಾತ್ರ ವಹಿಸುತ್ತಿವೆ. ಇದಲ್ಲದೆ ಇಲಾಖೆಯ ತಾಂತ್ರಿಕ ಸಿಬ್ಬಂದಿಗಳಿಗೆ ಪುನರ್ಮನನ ತರಬೇತಿಯನ್ನು ಒದಗಿಸಿ ಹೊಸ ತಾಂತ್ರಿಕತೆಗಳ ಬಗ್ಗೆ ತಿಳುವಳಿಕೆ ನೀಡಲಾಗುತ್ತಿದೆ. ಚಿಟ್ಟೆ ಕೊರೆದ ಗೂಡುಗಳಿಂದ ಕರಕುಶಲ ವಸ್ತುಗಳಾದ ಹೂಗುಚ್ಛಗಳು, ಹಾರಗಳು, ಶುಭಾಶಯ ಪತ್ರಗಳು, ಇತ್ಯಾದಿಗಳನ್ನು ತಯಾರಿಸುವ ಬಗ್ಗೆಯೂ ಮಹಿಳಾ ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗುತ್ತಿದೆ. ಈ ತರಬೇತಿ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಪ್ರತ್ಯೇಕ ವಸತಿ ಸೌಲಭ್ಯ ಕಲ್ಪಿಸಲಾಗಿದೆ.

ಇವುಗಳ ಜೊತೆಗೆ, ಸರ್ಕಾರಿ ರೇಷ್ಮೆ ಕೃಷಿ ಕ್ಷೇತ್ರ, ಹಿರೇಬಾಗೇವಾಡಿ, ಬೆಳಗಾವಿ ಜಿಲ್ಲೆ, ಮಹಿಳಾ ಪ್ರಾತ್ಯಕ್ಷತೆ ಕ್ಷೇತ್ರ, ಬೀದರ್ ಹಾಗೂ ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯಲ್ಲಿಯೂ ಸಹ ರೇಷ್ಮೆ ಬೆಳೆಗಾರರಿಗೆ ತರಬೇತಿಯನ್ನು ನೀಡಲಾಗುತ್ತಿದೆ.

2018–19ನೇ ಸಾಲಿನಲ್ಲಿ ಏರ್ಪಡಿಸಿದ ವಿವಿಧ ತರಬೇತಿ ಕಾರ್ಯಕ್ರಮಗಳ ಪ್ರಗತಿ ವಿವರ ಕೆಳಕಂಡಂತಿದೆ :

| ಕ್ರ.ಸಂ | ತರಬೇತಿಯ ವಿವರ | ಭಾಗವಹಿಸಿದವರ ಸಂಖ್ಯೆ |
|---|---|---|
| 1 | ಅಧಿಕಾರಿಗಳ ಕಾರ್ಯಾಗಾರ | 74 |
| 2 | ತಾಂತ್ರಿಕ ಸಿಬ್ಬಂದಿಗಳಿಗೆ ಪುನರ್‌ಮನನ ತರಬೇತಿ | 347 |
| 3 | ಚಿಟ್ಟೆ ಕೊರೆದ ಗೂಡಿನ ಕರಕುಶಲ ತರಬೇತಿ | 276 |
| 4 | ತರಬೇತಿ ಸಂಸ್ಥೆಗಳಲ್ಲಿ ರೈತರಿಗೆ 4 ದಿನಗಳ ತರಬೇತಿ | 3622 |
| 5 | ಕ್ಷೇತ್ರಮಟ್ಟದಲ್ಲಿ ರೈತರಿಗೆ ಒಂದು ದಿನದ ತರಬೇತಿ | 8675 |
| 6 | ರೇಷ್ಮೆ ನೂಲು ಬಿಚ್ಚಾಣಿಕೆದಾರರಿಗೆ ತರಬೇತಿ | 120 |
| | **ಒಟ್ಟು** | **13114** |

ಮೇಲ್ಕಂಡ ತರಬೇತಿಯಲ್ಲದೆ, "ರೈತರಿಂದ ರೈತರಿಗೆ ತರಬೇತಿ" ಕಾರ್ಯಕ್ರಮದಡಿ 22 ಜಿಲ್ಲೆಗಳ 46 ದ್ವಿತಳಿ ಕ್ಲಸ್ಟರ್ ವ್ಯಾಪ್ತಿಯಲ್ಲಿರುವ ಪ್ರಗತಿಪರ ದ್ವಿತಳಿ ರೇಷ್ಮೆ ಬೆಳೆಗಾರರಿಂದ 12391 ರೇಷ್ಮೆ ಬೆಳೆಗಾರರಿಗೆ ಗ್ರಾಮಮಟ್ಟದಲ್ಲಿ ತರಬೇತಿ ನೀಡಲಾಗಿದೆ.

23.2 ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ, ತಲಘಟ್ಟಪುರ, ರೇಷ್ಮೆ ಹುಳು ಬಿತ್ತನೆ ಪರೀಕ್ಷಾ ಪ್ರಯೋಗಾಲಯ, ಕೊಡತಿ, ಕೇಂದ್ರೀಯ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ, ಮೈಸೂರು ಮತ್ತು ಕೇಂದ್ರೀಯ ರೇಷ್ಮೆ ತಾಂತ್ರಿಕ ಸಂಶೋಧನೆ ಸಂಸ್ಥೆ, ಬೆಂಗಳೂರು ಇಲ್ಲಿ ಇಲಾಖೆಯ ತಾಂತ್ರಿಕ ಅಧಿಕಾರಿ:ಸಿಬ್ಬಂದಿಗಳಿಗೆ ರೇಷ್ಮೆ ಕೃಷಿ ಅಭಿವೃದ್ಧಿಗಾಗಿ ಇತ್ತೀಚಿಗೆ ಹೊರತಂದಿರುವ ತಾಂತ್ರಿಕತೆಗಳ ಬಗ್ಗೆ ತರಬೇತಿ ನೀಡಲಾಗುತ್ತಿದೆ. ಇತರ ತರಬೇತಿ ಸಂಸ್ಥೆಗಳಾದ ಹೈದರಾಬಾದಿನ Extension Education Institute ಮತ್ತು ಮ್ಯಾನೇಜ್ ಹಾಗೂ ಮೈಸೂರಿನಲ್ಲಿರುವ ರಾಜ್ಯ ಆಡಳಿತ ತರಬೇತಿ ಸಂಸ್ಥೆ ಮತ್ತು ಶ್ರೀ ಅಬ್ದುಲ್ ನಜೀರ್ ಸಾಬ್ ಗ್ರಾಮೀಣ ಅಭಿವೃದ್ಧಿ ತರಬೇತಿ ಸಂಸ್ಥೆ ಮತ್ತು ಆಯಾ ಜಿಲ್ಲೆಯ ತರಬೇತಿ ಸಂಸ್ಥೆ, ಬೆಂಗಳೂರಿನ ವಿತ್ತೀಯ ಕಾರ್ಯ ನೀತಿ ಸಂಸ್ಥೆ, EMPRI ಹಾಗೂ ರಾಜ್ಯದ ಇ–ಆಡಳಿತ ಕೇಂದ್ರದ ಸಹಭಾಗಿತ್ವದಲ್ಲಿ ನವದೆಹಲಿಯ ಐ.ಐ.ಪಿ.ಎ.ಯಲ್ಲಿನ ವಿಶೇಷ ತರಬೇತಿ ಕಾರ್ಯಕ್ರಮಗಳಿಗೂ ಸಹಾ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳನ್ನು ನಿಯೋಜಿಸಲಾಗುತ್ತಿದೆ.

## 24.0 ದೃಶ್ಯ – ಶ್ರಾವ್ಯ ಮತ್ತು ಪ್ರಚಾರ :

ಇಲಾಖೆಯು "ರೇಷ್ಮೆ ಕೃಷಿ" ದ್ವೈಮಾಸಿಕ ಸಂಚಿಕೆಯನ್ನು ಹೊರತರುತ್ತಿದ್ದು, ಇದರಲ್ಲಿ ರೇಷ್ಮೆ ಚಟುವಟಿಕೆಗಳು, ನೂತನ ತಾಂತ್ರಿಕತೆಗಳು, ಋತುಮಾನ ಹಾಗೂ ಹವಾಮಾನಕ್ಕೆ ಅನುಗುಣವಾಗಿ ಸೂಕ್ತ ಸಲಹೆಗಳು, ರಾಜ್ಯದ ರೇಷ್ಮೆ ಉದ್ಯಮದ ಭಾಗೀದಾರರ ಯಶೋಗಾಥೆಗಳು, ವೈಜ್ಞಾನಿಕ ಹಾಗೂ ಉಪಯುಕ್ತ ಮಾಹಿತಿಗಳನ್ನು ಒಳಗೊಂಡ ಲೇಖನಗಳನ್ನು ಮತ್ತು ರೇಷ್ಮೆ ಗೂಡು, ನೂಲಿನ ಧಾರಣೆಗಳನ್ನು ಪ್ರಕಟಿಸಲಾಗುತ್ತಿದೆ.

2018–19ನೇ ಸಾಲಿನ ಅಭಿವೃದ್ಧಿ ಚಟುವಟಿಕೆಗಳು, ತಾಂತ್ರಿಕತೆ, ಇಲಾಖೆಯ ಯೋಜನೆ ಹಾಗೂ ಕಾರ್ಯಕ್ರಮಗಳ ಕುರಿತು ದೂರದರ್ಶನ, ಆಕಾಶವಾಣಿ ಮತ್ತು ಮುದ್ರಣ ಮಾಧ್ಯಮಗಳ ಮೂಲಕ ಪ್ರಚಾರ ಕೈಗೊಳ್ಳಲಾಗಿದೆ.

2018–19ನೇ ಸಾಲಿನಲ್ಲಿ ಇಲಾಖೆಯ ಮುದ್ರಣ ಕಾರ್ಯಗಳು ಹಾಗೂ ಪ್ರಚಾರ ಕಾರ್ಯಕ್ರಮಗಳಿಗಾಗಿ ರೂ.23.73 ಲಕ್ಷಗಳ ವೆಚ್ಚ ಭರಿಸಲಾಗಿದೆ.

## 25.0 ರೇಷ್ಮೆ ರೈತ ಉತ್ಪಾದಕ ಸಂಸ್ಥೆ (ಎಫ್.ಪಿ.ಓ)

ರಾಜ್ಯದಲ್ಲಿ ಪ್ರಾರಂಭಿಕವಾಗಿ ಬಳ್ಳಾರಿ ಜಿಲ್ಲೆಯ ಕೂಡ್ಲಗಿ, ಬೆಳಗಾವಿ ಜಿಲ್ಲೆಯ ಬೆಳಗಾವಿ, ಮಂಡ್ಯ ಜಿಲ್ಲೆಯ ಕೊಪ್ಪ, ತುಮಕೂರು ಜಿಲ್ಲೆಯ ಪಾವಗಡ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟಗಳಲ್ಲಿ 05 ರೇಷ್ಮೆ ರೈತ ಉತ್ಪಾದಕ ಸಂಸ್ಥೆಗಳನ್ನು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಪ್ರಾರಂಭಿಸಲಾಗಿದೆ. ರೇಷ್ಮೆ ಭಾಗೀದಾರರನ್ನು ರೇಷ್ಮೆ ರೈತ ಉತ್ಪಾದಕ ಸಂಸ್ಥೆಯ ಸದಸ್ಯರನ್ನಾಗಿ ಮಾಡಿ, ಒಂದೆಡೆ ಸೇರಿಸಿ ಸದಸ್ಯರುಗಳ ಹಿತಾಸಕ್ತಿಯನ್ನು ಕಾಪಾಡುವುದು ಮತ್ತು ಆರ್ಥಿಕ ಸಹಾಯ ಒದಗಿಸುವುದರೊಂದಿಗೆ ಸಂಸ್ಥೆಯ ಸದಸ್ಯರಿಗೆ ಅಗತ್ಯ ಸವಲತ್ತುಗಳು ಸುಲಭವಾಗಿ ಮತ್ತು ಉತ್ತಮ ಧಾರಣೆ ದೊರಕುವಂತೆ ನೋಡಿಕೊಳ್ಳುವುದು ಮತ್ತು ಅವರನ್ನು ಆರ್ಥಿಕವಾಗಿ ಮತ್ತು ವ್ಯವಹಾರಿಕವಾಗಿ ಸದೃಢರನ್ನಾಗಿ ಮಾಡುವುದು ಮೂಲ ಉದ್ದೇಶವಾಗಿರುತ್ತದೆ. ಎಲ್ಲಾ ರೇಷ್ಮೆ ಉತ್ಪಾದಕ ಸಂಸ್ಥೆಗಳು ಅನುಷ್ಠಾನದ ಮೂರನೇ ವರ್ಷದಲ್ಲಿದೆ. ಯೋಜನಾ ವೆಚ್ಚ ರೂ.202.85 ಲಕ್ಷಗಳಾಗಿದ್ದು, ಇದರಲ್ಲಿ ಪ್ರತಿಯೊಂದು ರೇಷ್ಮೆ ರೈತ ಉತ್ಪಾದಕ ಸಂಸ್ಥೆಗೆ ರೂ.40.57 ಲಕ್ಷ ಹಂಚಿಕೆಯಾಗಿರುತ್ತದೆ. ಯೋಜನೆಗಾಗಿ ಈವರೆಗೂ ರೂ.150.00ಲಕ್ಷ ಬಿಡುಗಡೆಯಾಗಿದ್ದು ಇದರಲ್ಲಿ ರೂ.134.86 ಲಕ್ಷಗಳು ವೆಚ್ಚವಾಗಿರುತ್ತದೆ.

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು
ಹಾಗೂ ರೇಷ್ಮೆ ನಿರ್ದೇಶಕರು